# ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಮುಖ್ಯ ಆಯುಕ್ತರ ಕಾರ್ಯಾಲಯ, ನರಸಿಂಹರಾಜ ಚೌಕ, ಬೆಂಗಳೂರು-560002

ಸಂಖ್ಯೆ: ಮು.ಆ/ಜಿಬಿಎ/ಪಿ.ಆರ್/ 53 /2026-27 ದಿನಾಂಕ: 04-05-2026

## ಸುತ್ತೋಲೆ

**ವಿಷಯ:-** ಮಾನ್ಸೂನ್ ಪೂರ್ವ ಸಿದ್ಧತೆ ಪ್ರಯುಕ್ತ **ಎಲ್ಲಾ ಆರ್ಟೀರಿಯಲ್ ಹಾಗೂಸಬ್-ಆರ್ಟೀರಿಯಲ್ ಮತ್ತು ಇತರೇ ಪ್ರಮುಖ ರಸ್ತೆಗಳಲ್ಲಿ ಮಳೆ ನೀರು ಚರಂಡಿ ಹೂಳುತಗೆಯುವುದು, Shoulder Drains ಹಾಗೂ Grating ಗಳ ಸ್ವಚ್ಛತೆಯನ್ನು** ಖಾತರಿ ಪಡಿಸಿಕೊಳ್ಳುವ ಬಗ್ಗೆ.

**ಉಲ್ಲೇಖ:-**
1. ಮುಖ್ಯ ಆಯುಕ್ತರವರು, ಜಿ.ಬಿ.ಎ ರವರ ಸುತ್ತೋಲೆ ಸಂಖ್ಯೆ: ಮು.ಆ/ಜಿಬಿಎ/ಪಿಆರ್/05/2026-27, ದಿನಾಂಕ:02-04-2026.
2. ಮಾನ್ಯ ಉಪಮುಖ್ಯ ಮಂತ್ರಿಗಳ ಕಛೇರಿ ಪತ್ರ ಸಂಖ್ಯೆ: ಡಿ.ಸಿ.ಎಂ/ಗೃ.ಕ/128/2026-27, ದಿನಾಂಕ:29-04-2026.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮುಂದಿನ ದಿನಗಳಲ್ಲಿ ಜೂನ್ ಮಾಹೆಯಲ್ಲಿ ಮಾನ್ಸೂನ್ ಸಮೀಪಿಸುತ್ತಿದ್ದು ಹಾಗೂ ಈಗಾಗಲೇ ಪೂರ್ವ ಮಾನ್ಸೂನ್ ಮಳೆಯ ಆರಂಭವಾಗಿ ಇತ್ತೀಚಿಗೆ ದಿನಾಂಕ:29-04-2026 ರಂದು ಮಳೆಯಾದ ಸಂದರ್ಭದಲ್ಲಿ ನಗರಾದ್ಯಂತ ಹಲವಾರು ಕಡೆ ಮಳೆ ನೀರು ರಸ್ತೆಗಳಲ್ಲಿ ನಿಂತಿರುವುದು ಮತ್ತು ಕೆಲವು ಕಡೆ ಮನೆಗಳ ಬೇಸ್‌ಮೆಂಟ್‌ಗೆ ನೀರು ನುಗ್ಗಿರುವುದಾಗಿ ಮಾಧ್ಯಮಗಳಲ್ಲಿ ವರದಿಯಾಗಿರುತ್ತದೆ ಹಾಗೂ ಕಂಟ್ರೋಲ್ ರೂಂಗಳ ದೂರವಾಣಿ ಹಾಗೂ ಸಹಾಯವಾಣಿ ಗಳಿಗೆ ಹಲವಾರು ದೂರುಗಳು ದಾಖಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಪ್ರಮುಖವಾಗಿ ರಾಜಕಾಲುವೆಗಳಿಗೆ ಸಂಪರ್ಕಿಸುವ ಹಾಗೂ ಇತರೇ ವಾರ್ಡ್ ರಸ್ತೆಗಳ ಚರಂಡಿಗಳ ನೀರನ್ನು ರಾಜಕಾಲುವೆಗಳಿಗೆ ಸಾಗಿಸುವ ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳ ಮಳೆ ನೀರು ಚರಂಡಿಗಳಲ್ಲಿ ಹೂಳುತೆಗೆದಿರುವುದನ್ನು, Shoulder Drain ಹಾಗೂ Gratings ಗಳು ಸ್ವಚ್ಛವಾಗಿರುವುದನ್ನು ಖಾತರಿಪಡಿಸಿಕೊಳ್ಳುವುದು ಅತ್ಯಾವಶ್ಯಕವಾಗಿರುತ್ತದೆ. ಆದ್ದರಿಂದ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ತಂಡಗಳನ್ನು ರಚಿಸಿ, ಆಯಾ ನಗರ ಪಾಲಿಕೆಗಳ ವ್ಯಾಪ್ತಿಯ **ಎಲ್ಲಾ ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್** ರಸ್ತೆಗಳ ಮಳೆ ನೀರು ಚರಂಡಿಗಳಲ್ಲಿ ಒಂದು ಕಿ.ಮೀ ತಸ್ತೆಯಲ್ಲಿ ಕನಿಷ್ಠ **(5 X 2 ಕಡೆ)= 10 ಕಡೆ ಡ್ರೈನ್ ಸ್ಲಾಬ್‌ಗಳ ಅಥವಾ ಗ್ರೇಟಿಂಗ್‌ಗಳನ್ನು ತೆರೆದು ನೀರು ಸರಾಗವಾಗಿ ಹರಿಯಲು ಅವಕಾಶವಿದೆಯೇ ಅಥವಾ ಹೂಳು ತುಂಬಿದೆಯೇ ಎಂಬುದನ್ನು ಪರಿಶೀಲಿಸಿ** ಹೂಳುತೆಗೆಯಲು ಅಗತ್ಯ ಕ್ರಮವಹಿಸಲು ಈ ಕೆಳಕಂಡಂತೆ ಕ್ರಮವಹಿಸಲು ಸೂಚಿಸಿದೆ.

- **ಎಲ್ಲಾ ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳ ಎರಡೂ ಕಡೆ ತಗ್ಗುಪ್ರದೇಶ ಮತ್ತು ಚರಂಡಿಗಳಲ್ಲಿ ತಿರುವು ಇರುವುದನ್ನು ಮತ್ತು Intersect ಆಗಿರುವುದನ್ನು ಗಮನದಲ್ಲಿಟ್ಟುಕೊಂಡು ಒಂದು ಕಿ.ಮೀ (5 X 2 ಕಡೆ)= 10 ಕಡೆ ಡ್ರೈನ್ ಸ್ಲಾಬ್‌ಗಳು/ ಗ್ರೇಟಿಂಗ್‌ಗಳನ್ನು ತೆರೆದು ಮಳೆ ನೀರು ಸರಾಗವಾಗಿ ಹರಿಯಲು ಅವಕಾಶವಿದೆಯೇ ಅಥವಾ ಹೂಳು ತುಂಬಿದೆಯೇ** ಎಂಬುದರ ಬಗ್ಗೆ ಪರಿಶೀಲಿಸತಕ್ಕದ್ದು.
- ಸದರಿ ಎಲ್ಲಾ ಮಳೆ ನೀರು ಚರಂಡಿಗಳು **ಹತ್ತಿರವಿರುವ ರಾಜಕಾಲುವೆಗೆ ಸಂಪರ್ಕವಾಗಿರುವುದರ ಬಗ್ಗೆ ಹಾಗೂ ಸಂಪರ್ಕಗಳ ಜಾಗದಲ್ಲಿ ಯಾವುದಾದರೂ ಅಡೆತಡೆಗಳು** ಇದೆಯೇ ಎಂಬುದನ್ನು ಪರಿಶೀಲಿಸಿ ತೆರವುಗೊಳಿಸಲು ಕ್ರಮವಹಿಸತಕ್ಕದ್ದು.



Scanned with OKEN Scanner

- ಕೆಲವು ಕಡೆ ಮಳೆ ನೀರು ಚರಂಡಿಗಳ ಮಾರ್ಗಕ್ಕೆ ಅಡ್ಡಲಾಗಿ **ಒಳಚರಂಡಿ / ಕುಡಿಯುವ ನೀರಿನ ಕೊಳವೆ ಮಾರ್ಗಗಳು/ಇತರೇ ಉಪಯುಕ್ತತೆಗಳು ಹಾದುಹೋಗಿದ್ದು,** ಅಂತಹ ಕಡೆ ಪರಿಶೀಲಿಸಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಥವಾ ಸಂಬಂಧಪಟ್ಟ ಇಲಾಖೆ/ಸಂಸ್ಥೆಯ ಅಧಿಕಾರಿಗಳೊಂದಿಗೆ ಸಮನ್ವಯಿಸಿ ಅವಶ್ಯಕವಿದ್ದಲ್ಲಿ ಅಂತಹ ಕೊಳವೆ ಮಾರ್ಗಗಳನ್ನು ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಲು ಅಗತ್ಯ ಕ್ರಮವಹಿಸುವುದು.

- **ಬೃಹತ್ ನೀರುಗಾಲುವೆಗಳಲ್ಲಿ AMC ತಂಡಗಳಿಂದ ಕಾಲಕಾಲಕ್ಕೆ ಹೂಳು ತೆಗೆದಿರುವ** ಬಗ್ಗೆ ಖಾತರಿಪಡಿಸಿಕೊಳ್ಳತಕ್ಕದ್ದು.

- **ಮಳೆ ನೀರುಚರಂಡಿಗೆ ಅಡ್ಡಲಾಗಿ ಮರಗಳು ಅಥವಾ ಇತರೇ ಯಾವುದಾದರೂ ಉಪಯುಕ್ತತೆಗಳು** ಇದ್ದಲ್ಲಿ ಅರಣ್ಯ ಇಲಾಖೆ ಅಥವಾ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯಿಸಿ ಸ್ಥಳಾಂತರ / ತೆರವುಗೊಳಿಸಲು ಕ್ರಮವಹಿಸತಕ್ಕದ್ದು.

ಎಲ್ಲಾ ನಗರ ಪಾಲಿಕೆಗಳು ಈ ಕೂಡಲೇ ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸುವುದು ಅತ್ಯಾವಶ್ಯಕವಾಗಿದ್ದು, **ತಮ್ಮ ನಗರ ಪಾಲಿಕೆಗಳಲ್ಲಿ ಲಭ್ಯವಿರುವ ಸಹಾಯಕ ಅಭಿಯಂತರರು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕಾರ್ಯಪಾಲಕ ಅಭಿಯಂತರರು, ಹೊರಗುತ್ತಿಗೆ ಅಭಿಯಂತರರು, ಯೋಜನಾ ಸಮಾಲೋಚಕರುಗಳ ಅಭಿಯಂತರರು ಹಾಗೂ ಇತ್ತೀಚಿನ CMIDP, SIP, White Topping, Word bank SWD Work ಹಾಗೂ ಇತರೇ ಅಭಿವೃದ್ಧಿ ಕಾಮಗಾರಿಗಳಿಗೆ ನಿಯೋಜಿಸಲಾಗಿರುವ ಗುತ್ತಿಗೆದಾರರುಗಳ ಅಭಿಯಂತರರುಗಳನ್ನು ತೊಡಗಿಸಿಕೊಂಡು, ಅಧೀಕ್ಷಕ ಅಭಿಯಂತರರು, ಮುಖ್ಯ ಅಭಿಯಂತರರು, ಜಂಟಿಆಯುಕ್ತರು, ಅಪರ ಆಯುಕ್ತರು (ಅಭಿವೃದ್ಧಿ) ರವರ ಮೇಲುಸ್ತುವಾರಿಯಲ್ಲಿ ತಂಡಗಳನ್ನು ರಚಿಸಿ,** ದಿನಾಂಕ:08-05-2026 ರೊಳಗೆ ಈ ಮೇಲೆ ತಿಳಿಸಿರುವಂತೆ ಎಲ್ಲಾ ಆರ್ಟೀರಿಯಲ್ ಮತ್ತು ಸಬ್- ಆರ್ಟೀರಿಯಲ್ ರಸ್ತೆಗಳಲ್ಲಿ ಪರಿಶೀಲಿಸಿ ಛಾಯಾಚಿತ್ರಗಳೊಂದಿಗೆ ತೆಗೆಕೊಳ್ಳಲಾಗಿರುವ / ತೆಗೆದುಕೊಳ್ಳಲಾಗುವ ಕ್ರಮಗಳ ಬಗ್ಗೆ ರಸ್ತೆವಾರು ವರದಿಯನ್ನು ಸಲ್ಲಿಸುವಂತೆ ಎಲ್ಲಾ ನಗರ ಪಾಲಿಕೆಗಳಿಗೆ ಸೂಚಿಸಿದೆ.

**ಮುಖ್ಯ ಆಯುಕ್ತರು**
**ಗ್ರೇಟರ್ ಬೆಂಗಳೂರುಪ್ರಾಧಿಕಾರ**

**ಪ್ರತಿಗಳು:**

1) ಆಯುಕ್ತರು, ಬೆಂಗಳೂರು (ಕೇಂದ್ರ/ಪೂರ್ವ/ಪಶ್ಚಿಮ/ಉತ್ತರ/ದಕ್ಷಿಣ) ನಗರ ಪಾಲಿಕೆರವರ ಸೂಕ್ತ ಕ್ರಮಕ್ಕಾಗಿ.
2) ಅಪರ ಆಯುಕ್ತರು (ಅಭಿವೃದ್ಧಿ), ಬೆಂಗಳೂರು (ಕೇಂದ್ರ/ಪೂರ್ವ/ಪಶ್ಚಿಮ/ಉತ್ತರ/ದಕ್ಷಿಣ) ನಗರ ಪಾಲಿಕೆರವರ ಅಗತ್ಯ ಕ್ರಮಕ್ಕಾಗಿ.
3) ಮುಖ್ಯ ಅಭಿಯಂತರರು ಹಾಗೂ ಅಧೀಕ್ಷಕ ಅಭಿಯಂತರರು ಬೆಂಗಳೂರು (ಕೇಂದ್ರ/ಪೂರ್ವ/ಪಶ್ಚಿಮ/ಉತ್ತರ/ದಕ್ಷಿಣ) ನಗರ ಪಾಲಿಕೆ, ಬಿ-ಸ್ಮೈಲ್, ಯೋಜನಾ ಅನುಷ್ಠಾನ ಘಟಕ (ಜಿಬಿಎ),ರವರ ಅಗತ್ಯ ಕ್ರಮಕ್ಕಾಗಿ.
4) ಜಂಟಿ ಆಯುಕ್ತರು ಬೆಂಗಳೂರು (ಕೇಂದ್ರ/ಪೂರ್ವ/ಪಶ್ಚಿಮ/ಉತ್ತರ/ದಕ್ಷಿಣ) ನಗರ ಪಾಲಿಕೆ, ರವರ ಅಗತ್ಯ ಕ್ರಮಕ್ಕಾಗಿ.
5) ಕಾರ್ಯಪಾಲಕ ಅಭಿಯಂತರರು, ಬೆಂಗಳೂರು (ಕೇಂದ್ರ/ಪೂರ್ವ/ಪಶ್ಚಿಮ/ಉತ್ತರ/ದಕ್ಷಿಣ) ನಗರ ಪಾಲಿಕೆಯ ವಿಭಾಗ, ಬಿ-ಸ್ಮೈಲ್, ಯೋಜನಾ ಅನುಷ್ಠಾನ ಘಟಕ (ಜಿಬಿಎ),ರವರ ಅಗತ್ಯ ಕ್ರಮಕ್ಕಾಗಿ.
6) ಕಛೇರಿ ಪ್ರತಿ.



Scanned with OKEN Scanner